<u>**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**</u>

<u>**ತಿ. ನರಸೀಪುರ**</u>

<u>**ಸಿ ಸಿ ಸಂಖ್ಯೆ: 2143/2022**</u>

<u>**ದೋಷಾರೋಪಣೆ**</u>

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ತಿ ನರಸೀಪುರ ಆದ ನಾನು

1. ಕಬ್ಬಾಳ ಉಃ ಚಂದು ಉ: ಚಂದ್ರು ಬಿನ್ ರಮೇಶ
   26 ವರ್ಷ, ವಾಸಃ 4ನೇ ಮಹಡಿ,
   19ನೇ ಬಿಲ್ಡಿಂಗ್, ಏಕಲವ್ಯ ನಗರ,
   ಮೈಸೂರು ನಗರ.

2. ರಘು ಬಿನ್ ಲೇ ಕೃಷ್ಣಪ್ಪ
   38 ವರ್ಷ, ವಾಸಃ 4ನೇ ಮಹಡಿ,
   19ನೇ ಬಿಲ್ಡಿಂಗ್, ಏಕಲವ್ಯ ನಗರ,
   ಮೈಸೂರು ನಗರ. **(ಪ್ರತ್ಯೇಕಿಸಲಾಗಿದೆ)**

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪ ಎನೆಂದರೆಃ-

ಮೊದಲನೆಯದಾಗಿ, ದಿನಾಂಕ 13.06.2022 ರಂದು ರಾತ್ರಿ ಸಮಯದಲ್ಲಿ, ತಿ.ನರಸೀಪುರ ಪೋಲಿಸ್ ಠಾಣಾ ವ್ಯಾಪ್ತಿಯ, ತಿ. ನರಸೀಪುರ ಪಟ್ಟಣದ ಹಳೇ ತಿರುಮಕೂಡಲಿನ ಶ್ರೀ ಚೌಡೇಶ್ವರಿ ದೇವಸ್ಥಾನದ ಬಾಗಿಲಿನ ಪಕ್ಕದ ಕಬ್ಬಿಣದ ಗ್ರೀಲ್‌ನ್ನು ಸಿಲಂಡರ್ ಗ್ಯಾಸ್ ಕಟ್ಟರ್‌ನಿಂದ ಕತ್ತರಿಸಿ, ಕಳ್ಳತನ ಮಾಡುವ ಉದ್ದೇಶದಿಂದ

ಆ ದೇವಸ್ಥಾನಕ್ಕೆ ಅತಿಕ್ರಮ ಪ್ರವೇಶ ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 457 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸದರಿ ದೇವಸ್ಥಾನದ ಹುಂಡಿಯಲ್ಲಿದ್ದ ರೂ.62,000/- ನಗದು ಮತ್ತು ಎರಡು ಸ್ಟೀಲ್ ಹುಂಡಿಗಳನ್ನು ಕಳ್ಳತನ ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 380 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ದಿನಾಂಕಃ 03.07.2025.

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ತಿ. ನರಸೀಪುರ.**

**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ. ನರಸೀಪುರ.**

**ಸಿ ಸಿ ಸಂಖ್ಯೆ: 2143/2022**

**ದೋಷಾರೋಪಣೆ**

1. ಕಬ್ಬಾಳ ಉಃ ಚಂದು ಉ: ಚಂದ್ರು ಬಿನ್ ರಮೇಶ
   26 ವರ್ಷ, ವಾಸಃ 4ನೇ ಮಹಡಿ,
   19ನೇ ಬಿಲ್ಡಿಂಗ್, ಎಕಲವ್ಯ ನಗರ,
   ಮೈಸೂರು ನಗರ.

2. ರಘು ಬಿನ್ ಲೇ ಕೃಷ್ಣಪ್ಪ
   38 ವರ್ಷ, ವಾಸಃ 4ನೇ ಮಹಡಿ,
   19ನೇ ಬಿಲ್ಡಿಂಗ್, ಎಕಲವ್ಯ ನಗರ,
   ಮೈಸೂರು ನಗರ. **(ಪ್ರತ್ಯೇಕಿಸಲಾಗಿದೆ)**

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ ಹೌದು

ಪ್ರಶ್ನೆಃ ನೀವು ಸದರಿ ದೋಷಾರೋಪವನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ ವಿಚಾರಣೆಯಾಗಬೇಕು

(ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕಃ 03.07.2025.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ತಿ.ನರಸೀಪುರ.